ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಕಷ್ಟು ಬಂಡವಾಳವನ್ನು ತೊಡಗಿಸಲು ಸರ್ಕಾರವು ಕ್ರಮ ಕೈಗೊಂಡಿದೆ.

4822(5045) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಈ ವರ್ಷದಲ್ಲಿ ಎಷ್ಟು ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನ ಸೌಧಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಆ) ಹಾಗಿದ್ದಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ ಮಿನಿ ವಿಧಾನಸೌಧ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ತೀರ್ಮಾನದಲ್ಲಿದೆಯೇ:

ಇ) ಹಾಗಿದ್ದಲ್ಲಿ ಅಂದಾಜು ಯೋಜನಾ ವೆಚ್ಚವೆಷ್ಟು? ಯಾವಾಗ ಮಂಜೂರಾತಿ ಕೊಡಲಾಗುವುದು;

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು):

ಅ) ರಾಜ್ಯದ ಒಟ್ಟು 86 ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನ ಸೌಧ ಕಟ್ಟಡ ನಿರ್ಮಾಣ ಮಾಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಒಟ್ಟು 86 ತಾಲ್ಲೂಕು ಕೇಂದ್ರಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಾಣ ಪ್ರಸ್ತಾವನೆಯಲ್ಲಿ ಬೀಳಗಿ ತಾಲ್ಲೂಕು ಸಹ ಸೇರಿರುತ್ತದೆ.

ಇ) ಅಂದಾಜು ವೆಚ್ಚವನ್ನು ನಿಗಧಿಪಡಿಸಿರುವುದಿಲ್ಲ. ಸಂಪನ್ಮೂಲಗಳ ವ್ಯವಸ್ಥೆಯಾಗುತ್ತಲೇ ಮಿನಿ ವಿಧಾನ ಸೌಧ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕ್ರಮ ಜರುಗಿಸಲಾಗುವುದು.

4823 (5046) ಶ್ರೀ ನಿರಾಣಿ ಮುರುಗೇಶ್ ರುದ್ರಪ್ಪ (ಬೀಳಗಿ): ಮಾನ್ಯ, ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀಳಗಿ ತಾಲ್ಲೂಕಿನ ಸೊನ್ನಾ ಬಾದರದಿನ್ನಿ ಹಾಗೂ ಇತರ ಪುನರ್ವಸತಿ ಕೇಂದ್ರದಲ್ಲಿ ನಿರ್ಮಿಸಿದ ಶಾಲಾ ಕೊಠಡಿಗಳು ಕೇವಲ ಎರಡು ವರ್ಷದಲ್ಲಿ ಸೋರುತ್ತಿದ್ದು, ಕಿಟಕಿ ಬಾಗಿಲುಗಳು ಮುರಿದು ಕಟ್ಟಡ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಳಪೆ ಕಾಮಗಾರಿಗೆ ಕಾರಣರಾದವರನ್ನು ಗುರುತಿಸಿ ಅವರ ಮೇಲೆ ಸರ್ಕಾರ ಶಿಸ್ತಿನ ಕ್ರಮ ತೆಗೆದುಕೊಳ್ಳುವುದೇ?